


ಸನ್ಮಾನಿಸುವಾಗ ಚಪ್ಪಾಳೆ ತಟ್ಟಲೂ ಜನ ಬರುವುದಿಲ್ಲ ಸ್ವಾಮೀ, ಅದ್ಕೇ ಪತ್ನಿ ಜತೆಗೆ ಬನ್ನಿ ಎಂದಿದ್ದೆವು!




ನಮ್ಮ ತಂಡದ ಅಧ್ಯಯನದ ಫಲ ನೋಡಿದಿರಲ್ಲ!




ಆ ಶಾಸಕರ ಮೊಬೈಲ್ ನಂಬರ್ ಇದ್ರೆ ಕೊಡು ಗುರು.. ನಿನಗೆ ಪುಣ್ಯ ಬರುತ್ತೆ..!




ಸಾರಿ... ಡೊನೇಷನ್, ಫೀಸು ತುಂಬಾ ಕಡಿಮೆಯಾಯ್ತು! ಲೋಕ್ಲಾಸ್ ಪೀಪಲ್ಸ್ ಮಕ್ಕಳು ಸೇರಿಕೊಳ್ತಾರೆ.. ಬೇರೆ ಕಡೆ ಸೇರಿಸ್ತೀವಿ!



ಫೇಲು.. ದೇವರ ದಯೆ! ದೊಡ್ಡ ಮಗನ ಹಾಗೆ ಇವನು ಓದಿ ಎಲ್ಲಿ ಅಮೆರಿಕಾ, ಇಂಗ್ಲೆಂಡು ಅಂತ ಹಾರ್ತಾನೆ ಅಂತ ಇದ್ದೆ!




ನಿಮಗೆ ನೀರಿನ ಆವಶ್ಯಕತೆ ಎಲ್ಲಾ ದಿನಗಳಲ್ಲೂ ಇರುತ್ತೋ ಅಥವಾ ಬರ ಬಂದಾಗ ಮಾತ್ರನಾ?



ರಾಮ್: ನನಗೆ ನನ್ನ ಹೆಂಡ್ತಿ ಹೇಳೋ ಒಂದ್ ವಿಚಾರ ಅರ್ಥ ಆಗ್ತಿಲ್ಲ ಅದಿಕ್ಕೆ ನಿಮ್ಮನ್ನ ಕೇಳೋಣ ಅಂತ ಬಂದೆ.

ಶಾಮ್: ನೀವೇ ಪರವಾಗಿಲ್ಲ, ನನಗೆ ನನ್ನ ಹೆಂಡ್ತಿ ಹೇಳೋ ಯಾವ ವಿಚಾರವೂ ಅರ್ಥ ಆಗಲ್ಲ.

★★★

ಸೀತಾ: ನೀನೇ ಸಂಪಾದನೆ ಮಾಡ್ತಿದ್ರೂ ಖರ್ಚಿಗೆ ನಿನ್ನ ಗಂಡನ ಹಣ ಯಾಕೆ ಕೇಳ್ತೀಯಾ?

ಗೌರಿ: ಸಂಪಾದನೇನೂ ನಾವೇ ಮಾಡ್ಬೇಕು, ಖರ್ಚೂ ನಾವೇ ಮಾಡ್ಬೇಕು ಅಂದ್ರೆ ಕಷ್ಟ ಕಣೆ. ಅದಿಕ್ಕೆ ಸಂಪಾದನೆ ಅವರು ಮಾಡ್ಲಿ. ಖರ್ಚು ನಾನು ಮಾಡೋಣ ಅಂತ!

★★★

ಸುಬ್ಬು: ನನ್ನ ಹೆಂಡ್ತಿಗೆ ನಿಮ್ಮ ಬಗ್ಗೆ ಗೌರವ, ವಿಶ್ವಾಸ, ಎಲ್ಲ ಇದೆ

ರಾಜು: ಪರವಾಗಿಲ್ಲ, ಆದ್ರೆ ಅದಕ್ಕೆ ಕಾರಣ ಏನು?

ಸುಬ್ಬು: ನಿಮ್ಮ ಹೆಂಡ್ತಿ ಎಷ್ಟೇ ಉಗಿದ್ರೂ, ಹೊಡೆದ್ರೂ, ಉಪವಾಸ ಹಾಕಿದ್ರೂ, ನೀವು ತುಟಿ ಪಿಟಿಕ್ ಅನ್ನಲ್ವಂತೆ.

ಸಂಗ್ರಹ: ಸುಕೇಶವ



ವ್ಯಕ್ತಿ: ನನ್ನ ಬಗ್ಗೆ ನಿಮಗೆ ಗೊತ್ತಿರುವುದನ್ನು ಹೇಳಿ.

ಹಸ್ತ ಸಾಮುದ್ರಿಕಾಶಾಸ್ತ್ರಜ್ಞ: ನಿಮಗೆ ಇಬ್ಬರು ಮಕ್ಕಳು

ವ್ಯಕ್ತಿ: ಸುಳ್ಳು; ನನಗೆ ನಾಲ್ಕು ಮಕ್ಕಳಿವೆ

ಶಾಸ್ತ್ರಜ್ಞ: ನಾನು ಹೇಳುವ ಶಾಸ್ತ್ರ ಯಾವೊತ್ತು ಸುಳ್ಳು ಆಗೋದಿಲ್ಲಾ. ನೀವು ನಂಬಿರೋದು 4 ಮಕ್ಕಳು ಅಂತ, ಬೇಕಿದ್ದರೆ ನಿಮ್ಮ ಹೆಂಡತಿಯನ್ನೇ ಸರಿಯಾಗಿ ಕೇಳಿ!

ಸಂಗ್ರಹ: ಕೆ.ಜಯಮ್ಮ